# ಕರ್ನಾಟಕ ಸರ್ಕಾರದ ನಡವಳಿಕೆಗಳು

ವಿಷಯ: ಶೈಕ್ಷಣಿಕ ಸಂಸ್ಥೆಗಳಲ್ಲಿ ನಾಯಕ್, ನಾಯ್ಕ, ಬೇಡ, ವಾಲ್ಮೀಕಿ, ಪರಿವಾರ, ತಳವಾರ, ಕುರುಬ ಮತ್ತು ಮಾಲೇರು ಪಂಗಡಗಳ ಮೀಸಲಾತಿ ಕುರಿತು ಸ್ಪಷ್ಟೀಕರಣ.

—೦೦೦—

ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 220 ಎಸ್‌ಎಡಿ 86, ಬೆಂಗಳೂರು, ದಿನಾಂಕ: 9-9-1986.

ಓದಿ:—

ಸರ್ಕಾರಿ ಆದೇಶ ಸಂಖ್ಯೆ. ಎಸ್‌ಡಬ್ಲ್ಯೂಎಲ್ 63 ಎಸ್‌ಎಡಿ 86 ದಿನಾಂಕ: 23-1-1986.

ಪ್ರಸ್ತಾವನೆ:—

ಮೇಲೆ ಓದಿರುವ ಆದೇಶದಲ್ಲಿ ನಾಯಕ್, ನಾಯ್ಕ, ಬೇಡ, ವಾಲ್ಮೀಕಿ, ಪರಿವಾರ ಮತ್ತು ತಳವಾರ ಪಂಗಡಗಳನ್ನು 'ನಾಯಕ' ಪಂಗಡದ ಪರ್ಯಾಯ ಪದಗಳೆಂದು ಪರಿಗಣಿಸುವ ಬಗ್ಗೆ ಭಾರತ ಸರ್ಕಾರದ ತೀರ್ಮಾನದ, ನಿರೀಕ್ಷಣೆಯಂತೆ ಮೇರೆಗೆ ಕೆಳಕಂಡ ಪರಿಶಿಷ್ಟ ವರ್ಗಗಳ ಸೌಲಭ್ಯಗಳನ್ನು ಮೇಲ್ಕಂಡ 6 ಪಂಗಡಗಳಿಗೆ ಸೇರಿದವರಿಗೆ ವಿಸ್ತರಿಸಲಾಗಿತ್ತು.

(1) ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಮೀಸಲಾತಿ ಮತ್ತು

(2) ಶೈಕ್ಷಣಿಕ ವಿನಾಯಿತಿಗಳು.

ಮೇಲೆ ತಿಳಿಸಿದ ಆದೇಶದ ಕಂಡಿಕೆ 3 ರಲ್ಲಿ ಮಾಲೇರು ಮತ್ತು ಕುರುಬ ಪಂಗಡಗಳಿಗೂ ಸಹ ಮೇಲ್ಕಂಡ ಸೌಲಭ್ಯಗಳನ್ನು ವಿಸ್ತರಿಸಲಾಗಿತ್ತು. ನಾಯಕ್, ನಾಯ್ಕ, ಬೇಡ, ವಾಲ್ಮೀಕಿ, ತಳವಾರ, ಪರಿವಾರ ಪಂಗಡಗಳು ಹಿಂದುಳಿದ ಪಂಗಡದಲ್ಲಿ ಸೌಲಭ್ಯ ಪಡೆಯಬೇಕೇ ಅಥವಾ ಬೇಡವೆ ಎಂಬುದರ ಕುರಿತು ಸ್ಪಷ್ಟೀಕರಣ ನೀಡುವುದು ಅವಶ್ಯವಾಗಿದೆ. ಅದೂ ಅಲ್ಲದೆ ರಾಜ್ಯ ಸರ್ಕಾರವು "ಕುರುಬ' ಪಂಗಡವನ್ನು '' ಪರಿಶಿಷ್ಟ ವರ್ಗ '' ವೆಂದು ಪರಿಗಣಿಸಲು ಭಾರತ ಸರ್ಕಾರಕ್ಕೆ ಯಾವುದೇ ಶಿಫಾರಸ್ಸು ಮಾಡಿರುವುದಿಲ್ಲ.

## ಆ ದೇ ಶ

ನಾಯಕ್, ನಾಯ್ಕ, ಬೇಡ, ವಾಲ್ಮೀಕಿ, ಪರಿವಾರ ಮತ್ತು ತಳವಾರ ಪಂಗಡಗಳಿಗೆ ಸೇರಿದವರು ಪರಿಶಿಷ್ಟ ವರ್ಗಗಳಿಗೆ ಲಭ್ಯವಿರುವ (ಅ) ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಮೀಸಲಾತಿ (ಆ) ಶೈಕ್ಷಣಿಕ ವಿನಾಯಿತಿ ಸೌಲಭ್ಯಗಳನ್ನು ಹಿಂದುಳಿದ ಪಂಗಡಗಳಡಿ ಪಡೆಯಬಾರದೆಂದು ಮತ್ತು ಅವರು ಪರಿಶಿಷ್ಟ ವರ್ಗಗಳಡಿ ಮಾತ್ರ ಪಡೆಯಬೇಕೆಂದು ಸರ್ಕಾರವು ಆದೇಶಿಸಿದೆ.

2. ಸರ್ಕಾರವು 'ಕುರುಬ' ಪಂಗಡವನ್ನು (ಅ) ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಮೀಸಲಾತಿ ಮತ್ತು (ಆ) ಶೈಕ್ಷಣಿಕ ವಿನಾಯಿತಿ ಸೌಲಭ್ಯಕೋಸ್ಕರ ಹಿಂದುಳಿದ ಜಾತಿ ಪಟ್ಟಿಯಲ್ಲಿಯೇ ಮುಂದುವರೆಯುವಂತೆ ಸಹ ಆದೇಶಿಸಿದೆ.

3. ಆದ್ದರಿಂದ ದಿನಾಂಕ: 23-1-86 ರಂದಿನ ಸರ್ಕಾರದ ಆದೇಶ ಸಂಖ್ಯೆ. ಎಸ್‌ಡಬ್ಲ್ಯೂಎಲ್ 63 ಎಸ್‌ಎಡಿ 86 ರ ಆದೇಶ ಭಾಗದ ಕಂಡಿಕೆ 3ರ ಮೊದಲನೆಯ ವಾಕ್ಯದಲ್ಲಿ ಕಾಣಿಸಿರುವ '' ಮತ್ತು ಕುರುಬ '' ಪದಗಳನ್ನು ತೆಗೆದು ಹಾಕಲಾಗಿದೆ. ಅದೇ ವಾಕ್ಯದಲ್ಲಿ '' ಪಂಗಡಗಳು '' ಎಂಬ ಪದವನ್ನು '' ಪಂಗಡ '' ವೆಂದು ಓದತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ,

ಸಹಿ:—
(ಸಿ. ಡಿ. ಎಂ. ಗಣಪತಿ)
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

ಕ್ರ. ಸಂ. ಜಿಲಪವಕ: ಡಿ-9: ಸಿಆರ್-55: 86-87.

ಹಾಸನ. ದಿನಾಂಕ: 18-9-86.

1) ನಕಲನ್ನು ಜಿಲ್ಲೆಯ ಎಲ್ಲಾ ತಹಸೀಲ್ದಾರರುಗಳು ಹಾಗೂ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೂ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
2) ನಕಲನ್ನು ಜಿಲ್ಲೆಯ ಎಲ್ಲಾ ಕಾಲೇಜಿನ ಪ್ರಿನ್ಸಿಪಾಲರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
3) ನಕಲನ್ನು ಉಪವಿಭಾಗಾಧಿಕಾರಿಗಳು, ಹಾಸನ ಮತ್ತು ಸಕಲೇಶಪುರ ಇವರಿಗೆ ರವಾನಿಸಿದೆ.

ಜಿಲ್ಲಾಧಿಕಾರಿಗಳ ಪರವಾಗಿ,
ಹಾಸನ ಜಿಲ್ಲೆ, ಹಾಸನ.